# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೊಂಭತ್ತನೆಯಅಧಿವೇಶನ

## <u>ಕಾರ್ಯಕಲಾಪಗಳ ಪಟ್ಟಿ</u>

**ಬುಧವಾರ, ದಿನಾಂಕ:22ನೇ ಫೆಬ್ರವರಿ, 2023**

**(ಸಮಯ: ಬೆಳಗ್ಗೆ: 10.30ಗಂಟೆಗೆ)**

* * *

## 01. ಪ್ರಶ್ನೋತ್ತರ

ಅ) ಸದನದಲ್ಲಿಉತ್ತರಿಸುವ ಪ್ರಶ್ನೆಗಳು : ಏಳನೆಯ ಪಟ್ಟಿ

ಆ) **<u>ತಡೆಹಿಡಿಯಲಾದ ಪ್ರಶ್ನೆ:</u>**

| | |
|---|---|
| 3ನೇ ಪಟ್ಟಿಯಿಂದತಡೆಹಿಡಿಯಲಾದ **ಶ್ರೀ ಕೆ. ಹರೀಶ್‌ಕುಮಾರ್**ಅವರಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 31 (235)<br><br>3ನೇ ಪಟ್ಟಿಯಿಂದತಡೆಹಿಡಿಯಲಾದ **ಶ್ರೀ ಕೆ.ಎ. ತಿಪ್ಪೇಸ್ವಾಮಿ**ಅವರಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 32 (239) | ಮಾನ್ಯಪಶುಸಂಗೋಪನೆ ಸಚಿವರು |
| 3ನೇ ಪಟ್ಟಿಯಿಂದತಡೆಹಿಡಿಯಲಾದ **ಶ್ರೀ ಎನ್. ರವಿಕುಮಾರ್**ಅವರಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 33 (295) | ಮಾನ್ಯಮುಜರಾಯಿ, ಹಜ್ ಮತ್ತು ವಕ್ಫ್‌ಸಚಿವರು |
| 4ನೇ ಪಟ್ಟಿಯಿಂದತಡೆಹಿಡಿಯಲಾದ **ಶ್ರೀ ವೈ.ಎಂ. ಸತೀಶ್**ಅವರಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:49 (385) | ಮಾನ್ಯಕಂದಾಯಸಚಿವರು |

ಇ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಏಳನೆಯ ಪಟ್ಟಿ

## 02. ಸಭೆಯ ಮುಂದಿಡಲಾಗುವಕಾಗದ ಪತ್ರಗಳು

**ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಮುಖ್ಯಮಂತ್ರಿಗಳು)**ಅವರು:–

ಅ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆಇಲಾಖೆಗಳು ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಮೇಲಿನ ಮಾರ್ಚ್, 2021ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವಅನುಪಾಲನಾ ಲೆಕ್ಕಪರಿಶೋಧನಾವರದಿಯನ್ನು(2022ನೇ ವರ್ಷದ ವರದಿ ಸಂಖ್ಯೆ–7) ಸಭೆಯ ಮುಂದಿಡುವುದು.

ಆ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆಲೋಕೋಪಯೋಗಿಇಲಾಖೆಯಲ್ಲಿರಸ್ತೆ ಕಾಮಗಾರಿಗಳ ಯೋಜನೆ ಮತ್ತುಗುತ್ತಿಗೆ ನಿರ್ವಹಣೆ ಮೇಲಿನ ಮಾರ್ಚ್, 2021ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವಕಾರ್ಯನಿರ್ವಹಣಾ ಸಮೀಕ್ಷೆವರದಿಯನ್ನು(2022ನೇ ವರ್ಷದ ವರದಿ ಸಂಖ್ಯೆ-8) ಸಭೆಯ ಮುಂದಿಡುವುದು.

ಇ) ಮಾನ್ಯ ಸದಸ್ಯರುಗಳಿಗೆ ಈಗಾಗಲೇ ಒದಗಿಸಲಾಗಿರುವ ಮೂರನೇ ಮತ್ತು ನಾಲ್ಕನೇ ಪಟ್ಟಿಯರೀತ್ಯಾ.

## 03. ವರದಿಗಳನ್ನೊಪ್ಪಿಸುವುದು

ಅ. **ಶ್ರೀ ಎಂ. ನಾಗರಾಜು(ಸದಸ್ಯರು, ಸಾರ್ವಜನಿಕ ಉದ್ಯಮಗಳ ಸಮಿತಿ)**ಅವರುಕರ್ನಾಟಕ ವಿಧಾನ ಮಂಡಲದಸಾರ್ವಜನಿಕ ಉದ್ಯಮಗಳ ಸಮಿತಿಯ 134 ಹಾಗೂ 135ನೇ ವರದಿಯನ್ನೊಪ್ಪಿಸುವುದು.

ಆ. **ಡಾ: ಡಿ. ತಿಮ್ಮಯ್ಯ (ಸದಸ್ಯರು, ಸಭೆಯ ಮುಂದಿಡಲಾಗುವಕಾಗದ ಪತ್ರಗಳ ಸಮಿತಿ)** ಅವರು ಸಭೆಯ ಮುಂದಿಡಲಾಗುವಕಾಗದ ಪತ್ರಗಳ ಸಮಿತಿಯ 38ನೇ ವರದಿಯನ್ನೊಪ್ಪಿಸುವುದು.

ಇ. **ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಸದಸ್ಯರು, ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಮಿತಿ)** ಅವರುಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಮಿತಿಯ 38ನೇ ವರದಿಯನ್ನೊಪ್ಪಿಸುವುದು.

## 04. ವಿತ್ತೀಯಕಾರ್ಯಕಲಾಪ

ಅ) **ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)** ಅವರು:- 2022-23ನೇ ಸಾಲಿನ ಪೂರಕ ಅಂದಾಜುಗಳ (ಮೂರನೇ ಹಾಗೂ ಅಂತಿಮಕಂತು) ಬೇಡಿಕೆಗಳನ್ನು ಮಂಡಿಸುವುದು.

ಆ) 2023-24ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯಚರ್ಚೆ.

## 05. ಗಮನ ಸೆಳೆಯುವ ಸೂಚನೆಗಳು

೦1. **ಶ್ರೀ ನಿರಾಣಿ ಹಣಮಂತರುದ್ರಪ್ಪ**ಅವರು ಕೃಷ್ಣಾ ಮೇಲ್ದಂಡೆಯೋಜನೆಯಡಿಯಲ್ಲಿ ನಿರಾಶ್ರಿತರಿಗೆ ಪುನರ್ ವಸತಿಕಲ್ಪಿಸುವಕುರಿತು ಮಾನ್ಯ ಜಲಸಂಪನ್ಮೂಲ ಸಚಿವರ ಗಮನ ಸೆಳೆಯುವುದು.

೦2. **ಶ್ರೀ ಪಿ.ಆರ್. ರಮೇಶ್**ಅವರು ಬಿಬಿಎಂಪಿ ವ್ಯಾಪ್ತಿಯಲ್ಲಿನರಸ್ತೆ ಗುಂಡಿಗಳನ್ನು ಮುಚ್ಚುವ ಸಲುವಾಗಿ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಲು ಸರ್ಕಾರಕೈಗೊಂಡಿರುವ ಕ್ರಮಗಳ ಕುರಿತು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುವುದು.

೦3. **ಶ್ರೀ ಸಿ.ಎನ್. ಮಂಜೇಗೌಡ**ಅವರುಕಾರ್ಮಿಕ ವಿಮಾ ಆಸ್ಪತ್ರೆಗಳನ್ನು (ಇ.ಎಸ್.ಐ) ಸೊಸೈಟಿಯಾಗಿ ಪರಿವರ್ತಿಸಿ ಖಾಸಗೀಕರಣಗೊಳಿಸುವುದರ ಬದಲಾಗಿ ಆಸ್ಪತ್ರೆಗಳನ್ನು ಅತ್ಯಾಧುನಿಕ ವೈದ್ಯಕೀಯಉಪಕರಣದೊಂದಿಗೆ ಮೇಲ್ದರ್ಜೆಗೇರಿಸುವಕುರಿತು ಮಾನ್ಯಕಾರ್ಮಿಕ ಸಚಿವರ ಗಮನ ಸೆಳೆಯುವುದು.

೦೪. **ಶ್ರೀ ಕೆ. ಹರೀಶ್‌ಕುಮಾರ್**ಅವರು ಕರಾವಳಿ ಜಿಲ್ಲೆಯ ಸುತ್ತಮುತ್ತಲಿನ ಪಂಚ ಜಿಲ್ಲೆಗಳಿಗೆ ಅನುಕೂಲವಾಗುವಂತೆ ಹೈಕೋರ್ಟ್ ವಿಭಾಗೀಯ ಪೀಠವನ್ನು ಸ್ಥಾಪಿಸಬೇಕೆನ್ನುವಕುರಿತುಮಾನ್ಯಮುಖ್ಯಮಂತ್ರಿಯವರಗಮನ ಸೆಳೆಯುವುದು.

೦೫. **ಶ್ರೀ ಪುಟ್ಟಣ್ಣ**ಅವರುಅಲ್ಪಸಂಖ್ಯಾತರಕಲ್ಯಾಣಇಲಾಖೆಯಲ್ಲಿನ 15 ಜಿಲ್ಲಾ ಅಧಿಕಾರಿಗಳ(ಗ್ರೇಡ್-1) ಹುದ್ದೆಗಳಿಗೆ ಮುಂಬಡ್ತಿ ನೀಡುವಕುರಿತು ಮಾನ್ಯಮುಖ್ಯಮಂತ್ರಿಯವರಗಮನ ಸೆಳೆಯುವುದು.

೦೬. **ಶ್ರೀ ಯು.ಬಿ. ವೆಂಕಟೇಶ್**ಅವರು ಬೆಂಗಳೂರು ನಗರದಕತ್ರಗುಪ್ಪೆಗ್ರಾಮದ ಸರ್ವೆ ನಂ.15/1ರಲ್ಲಿ ಸಾರ್ವಜನಿಕಉದ್ದೇಶಕ್ಕಾಗಿ ಕಾಯ್ದಿರಿಸಿದ ನಿವೇಶನವನ್ನು ನಕಲಿ ದಾಖಲೆಗಳನ್ನು ಸೃಷ್ಟಿಸಿ ಅತಿಕ್ರಮಿಸಿಕೊಂಡಿರುವ ಕುರಿತುಮಾನ್ಯಮುಖ್ಯಮಂತ್ರಿಯವರ ಗಮನ ಸೆಳೆಯುವುದು.

೦೭. **ಶ್ರೀ ಎಸ್.ವ್ವಿ. ಸಂಕನೂರ**ಅವರುಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ 2011ರಿಂದ 2022ರವರೆಗೆ ಕಾರ್ಯನಿರ್ವಹಿಸಿ ನಿವೃತ್ತಿಯಾದ ಪ್ರಾಧ್ಯಾಪಕರು ಹಾಗೂ ಶಿಕ್ಷಕೇತರ ವರ್ಗಕ್ಕೆ ನಿವೃತ್ತಿ ಬಾಕಿ ಹಣ ಬಿಡುಗಡೆ ಮಾಡದಿರುವಕುರಿತು ಮಾನ್ಯಉನ್ನತ ಶಿಕ್ಷಣ, ಮಾಹಿತಿತಂತ್ರಜ್ಞಾನ ಮತ್ತುಜೈವಿಕತಂತ್ರಜ್ಞಾನ, ವಿಜ್ಞಾನ ಮತ್ತುತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರ ಗಮನ ಸೆಳೆಯುವುದು.

೦೮. **ಶ್ರೀ ಅಡಗೂರ್ ಹೆಚ್. ವಿಶ್ವನಾಥ್**ಅವರು ಪದ್ಮಭೂಷಣಡಾ: ಎಂ.ಸಿ. ಮೋದಿ ಪಬ್ಲಿಕ್‌ಟ್ರಸ್ಟ್‌ನಲ್ಲಿ 2014ರಿಂದ ಇಲ್ಲಿಯವರೆಗೆ ನಡೆಯುತ್ತಿರುವ ಅಕ್ರಮಗಳು ಹಾಗೂ ವಂಚನೆಗಳ ಕುರಿತು ಮಾನ್ಯ ಗೃಹ ಸಚಿವರ ಗಮನ ಸೆಳೆಯುವುದು.

## 06. ನಿಯಮ 330ರ ಮೇರೆಗೆ

೦1. **ಶ್ರೀಯುತರುಗಳಾದ ಬಿ.ಎಂ. ಫಾರೂಖ್, ಕೆ.ಎ. ತಿಪ್ಪೇಸ್ವಾಮಿ, ಶರವಣಟಿ.ಎ ಹಾಗೂ ಗೋವಿಂದರಾಜು**ಅವರುಗಳುದಕ್ಷಿಣಕನ್ನಡಜಿಲ್ಲೆ ಮುಡಿಪು ಮತ್ತುಇನ್ನಿತರೆ ಗ್ರಾಮಗಳಲ್ಲಿ ಕೆನರಾಕೈಗಾರಿಕಾ ಪ್ರದೇಶದ ವ್ಯಾಪ್ತಿಯಲ್ಲಿಕೈಗಾರಿಕಾ ಘಟಕಗಳ ಸ್ಥಾಪನೆಗೆ ರೈತರಿಂದ 700ಕ್ಕೂ ಹೆಚ್ಚು ಎಕರೆ ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಂಡಿರುವ ಕುರಿತು ಪ್ರಸ್ತಾಪಿಸುವುದು.

೦೨. **ಶ್ರೀ ಕೆ.ಎ. ತಿಪ್ಪೇಸ್ವಾಮಿ**ಅವರುರಾಜ್ಯ ಸರ್ಕಾರದಿಂದ ಹಾಲು ಒಕ್ಕೂಟಗಳಿಗೆ ನೀಡಬೇಕಾಗಿರುವ ನೂರಾರುಕೋಟಿ ಸಹಾಯಧನ ಬಿಡುಗಡೆ ಮಾಡದಿರುವುದರಿಂದರಾಜ್ಯದಲ್ಲಿ ಹಾಲು ಉತ್ಪಾದಕರುಎದುರಿಸುತ್ತಿರುವ ಸಂಕಷ್ಟದಕುರಿತು ಪ್ರಸ್ತಾಪಿಸುವುದು.

೦೩. **ಶ್ರೀ ಪ್ರಕಾಶ್ ಕೆ. ರಾಥೋಡ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು**ಅವರುರಾಜ್ಯದಲ್ಲಿರುವ ಖಾಸಗಿ ಶಾಲೆಗಳಲ್ಲಿ ಕೇಂದ್ರ ಪಠ್ಯಕ್ರಮವನ್ನು ಭೋದಿಸಲು ಶಿಕ್ಷಣ ಇಲಾಖೆಯಿಂದ ಎನ್.ಓ.ಸಿ. ಪಡೆಯಲು ಸಾಧ್ಯವಾಗದೆಇರುವ ಶಾಲೆಗಳ ಆಡಳಿತ ಮಂಡಳಿಯವರು ಅಕ್ರಮವಾಗಿ ನಕಲಿ ಎನ್.ಓ.ಸಿ. ಪತ್ರಗಳನ್ನು ನೀಡುತ್ತಿರುವಕುರಿತು ಪ್ರಸ್ತಾಪಿಸುವುದು.

೦೪. **ಶ್ರೀ ಮರಿತಿಬ್ಬೇಗೌಡ**ಅವರು ಪದವಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ನೇಮಕಗೊಂಡಿರುವಅತಿಥಿಉಪನ್ಯಾಸಕರಿಗೆ ಸೇವಾ ಸವಲತ್ತು ಮತ್ತು ಭದ್ರತೆಒದಗಿಸುವಕುರಿತು ಪ್ರಸ್ತಾಪಿಸುವುದು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

---

**ಪ್ರತಿ ದಿನದ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.**

**www.kla.kar.nic.in/council/council.htm**